ತರಹದ ಸಹಕಾರ ಸಂಘಗಳ/ಸಂಸ್ಥೆ/ಬ್ಯಾಂಕುಗಳ ಆಡಳಿತ ಮಂಡಳಿಗಳಿಗೆ ಮಾಡಿರುವ ಎಲ್ಲಾ ಅಧಿಕಾರೇತರ ಸದಸ್ಯರ ನಾಮನಿರ್ದೇಶನಗಳನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
(ಎ.ಸಿ. ದಿವಾಕರ್)
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

**PR-543**

**ಕರ್ನಾಟಕ ಸರ್ಕಾರ**

**ಸಂಖ್ಯೆ. ಕಾಇ 79 ಎಲ್ ಡಬ್ಲ್ಯೂಎ 2022**

**ಕರ್ನಾಟಕ ಸರ್ಕಾರದ ಸಚಿವಾಲಯ,**
**ವಿಧಾನಸೌಧ,**
**ಬೆಂಗಳೂರು ದಿನಾಂಕ: 17.03.2023**

**ತಿದ್ದುಪಡಿ**

**ಸರ್ಕಾರದ ಅಧಿಸೂಚನೆ ಸಂಖ್ಯೆ: ಕಾಇ 79 ಎಲ್ ಡಬ್ಲ್ಯೂಎ 2022 ದಿನಾಂಕ: 30.11.2022ರಲ್ಲಿ "ಆಯುರ್ವೇದ, ಯೋಗ, ಯುನಾನಿ, ಸಿದ್ದ, ಹೋಮಿಯೋಪತಿ (ಆಯುಷ್) ಹಾಗೂ ಅಲೋಪಥಿಕ್ ಔಷಧಿಗಳ ತಯಾರಿಕೆಯಲ್ಲಿ ಉದ್ಯೋಗ (ಉತ್ಪಾದನೆ, ವಿತರಣೆ ಜಾಹಿರಾತು ವಿಭಾಗಗಳ ಸಹಿತ)" ಅನುಸೂಚಿತ ಉದ್ದಿಮೆಯ ವ್ಯಾಪ್ತಿಗೆ ಒಳಪಡುವ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಅನ್ವಯವಾಗುವಂತೆ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಿದ್ದು, ಸದರಿ ಅಧಿಸೂಚನೆಯ ಕನಿಷ್ಠ ವೇತನ ಕೋಷ್ಟಕದಲ್ಲಿ ಈ ಕೆಳಕಂಡ ತಿದ್ದುಪಡಿಗಳನ್ನು ಈ ಅಧಿಸೂಚನೆಯ ಮೂಲಕ ಹೊರಡಿಸಲಾಗಿದೆ.**

1. **ಕುಶಲ ಕಾರ್ಮಿಕರು ವಿಭಾಗಕ್ಕೆ ಸಂಬಂಧಿಸಿದ ವೇತನವು ಕ್ರಮವಾಗಿ ವಲಯ (2) ರಲ್ಲಿ ದಿನಕ್ಕೆ ರೂ. 564.59 ಹಾಗೂ ತಿಂಗಳಿಗೆ ರೂ. 14679.24 ಗಳೆಂದು ಮತ್ತು ವಲಯ (3) ರಲ್ಲಿ ದಿನಕ್ಕೆ ರೂ. 513.26 ಹಾಗೂ ತಿಂಗಳಿಗೆ ರೂ. 13344.76 ಗಳೆಂದು ಓದಿಕೊಳ್ಳತಕ್ಕದ್ದು.**
2. **ಅರೆಕುಶಲ ಕಾರ್ಮಿಕರು ವಿಭಾಗಕ್ಕೆ ಸಂಬಂಧಿಸಿದ ವೇತನವು ಕ್ರಮವಾಗಿ ವಲಯ (2) ರಲ್ಲಿ ದಿನಕ್ಕೆ ರೂ.558.54 ಹಾಗೂ ತಿಂಗಳಿಗೆ ರೂ. 14521.94ಗಳೆಂದು ಹಾಗೂ ವಲಯ (3) ರಲ್ಲಿ ದಿನಕ್ಕೆ 507.76 ಹಾಗೂ ತಿಂಗಳಿಗೆ ರೂ. 13201.76 ಗಳೆಂದು ಓದಿಕೊಳ್ಳತಕ್ಕದ್ದು.**

**ಉಳಿದಂತೆ ಸದರಿ ಅಧಿಸೂಚನೆಯಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.**

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ**
**(ಎ. ಉಮಾದೇವಿ)**
**ಪೀಠಾಧಿಕಾರಿ-2,**
**ಕಾರ್ಮಿಕ ಇಲಾಖೆ (ಕನಿಷ್ಠ ವೇತನ)**

**PR-544**